ಅನೇಕ ಹಿಂದಿ ಪದವೀಧರರು ಇದ್ದಾರೆ. ಅವರನ್ನು ಜಿಲ್ಲಾ ಮಟ್ಟದಲ್ಲಿ ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡುತ್ತಿರಿ, ಇವರ ಸಮಾನಾಂತರವಾಗಿ ಈ ಹಿಂದಿ ಪದವೀಧರರನ್ನೂ ಕೂಡ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸ ಮಾಡಲು ತಯಾರಾಗಿದ್ದಾರೆ. ಆದುದರಿಂದ ದಯಮಾಡಿ ತಾವು ಇವತ್ತು ರಾಜ್ಯದಲ್ಲಿರುವಂತಹ ಈ ನಿರುದ್ಯೋಗಿ ಹಿಂದಿ ಪದವೀಧರರು ಯಾರಿದ್ದಾರೆ, ಅವರನ್ನು ಜಿಲ್ಲಾಮಟ್ಟದ ಶಿಕ್ಷಕರನ್ನಾಗಿ ನೇಮಕ ಮಾಡುವ ಮೂಲಕ ಇವತ್ತು ರಾಜ್ಯದಲ್ಲಿ ಸಮಸ್ಯೆಯಾಗಿರುವಂತಹ ಹಿಂದಿ ಶಿಕ್ಷಕರನ್ನು ನೇಮಕ ಮಾಡುವಂತಹ ಕೆಲಸವನ್ನು ಮಾನ್ಯ ಶಿಕ್ಷಣ ಸಚಿವರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ :— ಮಾನ್ಯ ಉಪಾಧ್ಯಕ್ಷರೆ, ಪ್ರಾಥಮಿಕ ಶಾಲೆಗಳಿಗೆ ಟಿ.ಸಿ.ಹೆಚ್. ಮಾಡಿದ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅವಕಾಶವಿತ್ತು. ಇಲ್ಲಿ ಇಂಗ್ಲೀಷ್, ಕನ್ನಡ, ವಿಜ್ಞಾನ, ಸಮಾಜ, ಪಾಠಗಳು ಹಾಗೂ ಹಿಂದಿ ಮುಂತಾದ ಎಲ್ಲಾ ವಿಷಯಗಳನ್ನು ಎಲ್ಲಾ ಶಿಕ್ಷಕರು ಬೋಧನೆ ಮಾಡಬೇಕು. ಇಲ್ಲಿ ಪ್ರತ್ಯೇಕವಾಗಿ ಶಿಕ್ಷಕರು ಇರುವುದಿಲ್ಲ. ಪ್ರೌಢಶಾಲೆಗಳಲ್ಲಿ ಮಾತ್ರ ಹಿಂದಿಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅವಕಾಶವಿದೆ. ಆದರೆ ಈ ರೀತಿಯಾಗಿ ಪ್ರಾಥಮಿಕ ಶಾಲೆಗಳಿಗೆ ನೇಮಕ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

(ಅ) ಸೂರತ್ಕಲ್ ಕ್ಷೇತ್ರದ ಪಿಲಿಕಳ ನಿಸರ್ಗಧಾಮ.

ಶ್ರೀ ಕುಂಭಿ ಸುಂದರರಾವ್ (ಸೂರತ್ಕಲ್) :— ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ತಾಲ್ಲೂಕಿನ ಸೂರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಪಿಲಿಕಳ ಎಂದು ಒಂದು ನಿಸರ್ಗಧಾಮವಿದೆ. ಇದು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಾ ಇದೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಕೋಟ್ಯಾಂತರ ರೂಪಾಯಿಗಳ ಅನುದಾನ ಅಲ್ಲಿಗೆ ಬರುತ್ತಿದೆ. ಈ ಸ್ಥಳ ಜಿಲ್ಲೆಯ ಒಂದು ಪ್ರಸಿದ್ಧವಾದಂತಹ ಸ್ಥಳವಾಗುವ ಎಲ್ಲಾ ಲಕ್ಷಣಗಳನ್ನು ಹೊಂದಿದೆ. ಇದುವರೆಗೂ ದಕ್ಷಿಣ ಕನ್ನಡ ಜಿಲ್ಲೆಗೆ ಬಂದವರು ಪುಣ್ಯ ಕ್ಷೇತ್ರಗಳನ್ನು ಸಂದರ್ಶನ ಮಾಡುತ್ತಿದ್ದರು. ಈಗ ಪಿಲಿಕುಳ ನಿಸರ್ಗಧಾಮವನ್ನು ಸಂದರ್ಶಿಸುವಂತಹ ಅವಕಾಶ ಉಂಟಾಗಿದೆ. ಈ ಪಿಲಿಕುಳದ ಬಗ್ಗೆ ದಕ್ಷಿಣ ಕನ್ನಡ ಜನರ ಅಪೇಕ್ಷೆ ಏನು ಎಂದರೆ ಡಾ: ಶಿವರಾಮಕಾರಂತರವರು ದಿವಂಗತರಾಗಿದ್ದು, ಅವರು ಜ್ಞಾನಪೀಠ ವಿಜೇತರು ಮತ್ತು ಕರ್ನಾಟಕ ರಾಜ್ಯದ ಪ್ರಸಿದ್ಧ ಸಾಹಿತಿಗಳು ಆಗಿದ್ದರು. ಅವರ ಹೆಸರನ್ನು ಈ ಪಿಲಿಕುಳಕ್ಕೆ ಇಡಬೇಕೆಂದು ಜನರ ಅಪೇಕ್ಷೆ ಇದೆ. ಈ ಪಿಲಿಕುಳ ಎನ್ನುವ ಹೆಸರು ಏನು ಹೇಳುತ್ತದೆಂದರೆ ಪಿಲಿ ಎಂದರೆ ಹುಲಿ, ಕುಳ ಎಂದರೆ ಕೂಳ ಅಲ್ಲಿ ಹುಲಿ ನೀರು ಕುಡಿಯಲು ಕೆರೆಗೆ ಬರುತ್ತಿತ್ತು ಎಂದು ಈ ಹೆಸರನ್ನು ಇಟ್ಟಿದ್ದಾರೆ. ಈಗ ಹುಲಿಗಳ ಸಂತತಿಯು ಇಲ್ಲ. ಅವು ನನ್ನ ಹೆಸರನ್ನು ಏಕೆ ತೆಗೆದರು ಎಂದು ಕೋರ್ಟಿಗೂ ಹೋಗುವ ಹಾಗೆ ಇಲ್ಲ. ಡಾ: ಶಿವರಾಮಕಾರಂತರ ಹೆಸರನ್ನು ಇಟ್ಟರೆ ಅದು ಸಮರ್ಪಕವಾಗುತ್ತದೆ, ಮತ್ತೆ ಎಲ್ಲರಿಗೂ ಒಪ್ಪಿಗೆಯಾಗುತ್ತದೆ. ಆದುದರಿಂದ ಸರ್ಕಾರ ಇಲ್ಲಿ ಪಿಲಿಕುಳ ಎನ್ನುವ ಹೆಸರನ್ನು ತೆಗೆದು ಡಾ: ಶಿವರಾಮ ಕಾರಂತರ ಹೆಸರನ್ನು ಇಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು :— ಇದಕ್ಕೆ ಯಾವ ಮಂತ್ರಿಗಳು ಉತ್ತರಿಸುವವರು..

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಸರ್ಕಾರ ಇಲ್ಲ. ಅಲ್ಲಿ ಯಾರಾದರೂ ಇದ್ದಾರಾ ನೋಡಿ. ನಿಯಮ ಇಲ್ಲ, ನೀತಿ ಇಲ್ಲ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಒಬ್ಬರು ಕೇಳಿ ಉತ್ತರವನ್ನು ಕೊಡುವುದು ಬೇಡವೇ?

ಶ್ರೀ ಕುಂಬ್ಳೆ ಸುಂದರರಾವ್ :— ಮಾನ್ಯ ಉಪಾಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಈಗ ಅದು ಶೂನ್ಯವಾಗಿ ಹೋಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಇದು ಏನು ಸಭೆಯೇ? ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಿ ಎಷ್ಟು ಹೊತ್ತು ಆಯಿತು. ಇಲ್ಲಿ ಜವಾಬ್ದಾರಿ ಬೇಡವೆ?

ಶ್ರೀಕುಂಬ್ಳೆ ಸುಂದರರಾವ್ :— ಮಾನ್ಯ ಉಪಾಧ್ಯಕ್ಷರೆ, ನಾನು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅದು ಶೂನ್ಯವಾಗಬಾರದು ಮಾನ್ಯವಾಗಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :— ನೋಟೀಸ್ ಬರುವುದು ಬಿಡುವುದು ನಮಗೆ ಗೊತ್ತಿಲ್ಲ. ಮಾನ್ಯ ಸದಸ್ಯರ ಸಮಸ್ಯೆಯನ್ನು ಕೇಳಿದ ಮೇಲೆ ನೀವು ರಿಪ್ಲೈ ಮಾಡುವುದಿಲ್ಲವೆಂದರೆ ಹೇಗೆ? ಮಾನ್ಯ ಕುಂಬ್ಳೆಸುಂದರರಾವ್‌ರವರೆ ಮಾನ್ಯ ಉಪಾಧ್ಯಕ್ಷರು ನಿಮಗೆ ಮಾತನಾಡಲು ಅವಕಾಶವನ್ನು ಕೊಟ್ಟಮೇಲೆ ನೀವು ಏಕೆ . ನೋಟೀಸ್ ಕೊಡುತ್ತಿರಾ? ನಾವು ಅವರಿಗೆ ನೋಟೀಸ್ ಕೊಡುವುದಕ್ಕೆ ಅಲ್ಲ ಇರುವುದು.

ಶ್ರೀ ಹೆಚ್. ಜಿ. ಗೋವಿಂದೇಗೌಡ :— ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಯಾವ ಮಂತ್ರಿ ಉತ್ತರಿಸಬೇಕೆಂದು ಹೇಳಿದರೆ ನಾವು ಇದ್ದೇವೆ, ನಾವು ಉತ್ತರ ಹೇಳುತ್ತೇವೆ. ಯಾರು ಮಂತ್ರಿಗಳು ಎಂದು ಅಡ್ರೆಸ್ ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :— ನಾವು ಕೇಳುವಂಥಾದ್ದು ಸರ್ಕಾರದ ಪರವಾಗಿ ಒಬ್ಬರು ಯಾರಾದರೂ ಮಂತ್ರಿಗಳು ಹೇಳಬೇಕು, ಯಾರು ಹೇಳುವುದಿಲ್ಲವೆಂದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ನಿಸರ್ಗಧಾಮಕ್ಕೆ ಸಂಬಂಧಪಟ್ಟ ಹಾಗೆ ಅರಣ್ಯ ಇಲಾಖೆಯವರು ಪ್ರೇಕ್ಷಣೀಯ ಸ್ಥಳ ಮಾಡಬೇಕೆನ್ನುವ ಕಾರಣಕ್ಕಾಗಿ ನೀವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಇದು ಒಂದು ನಿಸರ್ಗಧಾಮವಾಗಿ ಪರಿವರ್ತನೆಯಾಗಬೇಕೆನ್ನುವ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೀರಿ. ಮಾನ್ಯ ಅರಣ್ಯ ಸಚಿವರು ಸಭೆಯಲ್ಲಿದ್ದಾರೆ. ತಾವು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಸರ್ಕಾರ ಇದನ್ನು ಪರಿಶೀಲನೆ ಮಾಡಿ ಸೂಕ್ತವಾದಂತಹ ಕ್ರಮವನ್ನು ಕೈಗೊಳ್ಳುತ್ತದೆ.

(೪) ರಾಜ್ಯದಲ್ಲಿ ಲಿಕ್ಕರ್ ಮಾರುವುದರ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಲಿಕ್ಕರ್ ಮಾರುವಂಥಾದ್ದಕ್ಕೆ ಮೂರು ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿದ್ದಾರೆ.